**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .1012/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ಯು ಸಿ ಶಿವಕುಮಾರ | **ಚಾ.ಸಾ.-12** |
| **ತಂದೆ/ಗಂಡನ ಹೆಸರು** | - | ಲೇಟ್ ಚೌಡಯ್ಯ | **ಪ್ರಾ.ಸಾ.-6** |
| **ವಯಸ್ಸು** | - | 49 ವರ್ಷ | |
| **ಉದ್ಯೋಗ** | - | ಅಧ್ಯಕ್ಷರು ಮನ್ ಮುಲ್ | |
| **ವಾಸಸ್ಥಳ** | - | ಉಮ್ಮಡಹಳ್ಳಿ, ಮಂಡ್ಯ | |

ದಿನಾಂಕಃ 16-02-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು ಈ ಹಿಂದೆ 2014 ರಿಂದ 2019 ರವರೆಗೆ ಮಂಡ್ಯ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ದಲ್ಲಿ ಚುನಾಯಿತ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಹಾಲಿ ಸದರಿ ಒಕ್ಕೂಟದ ಅಧ್ಯಕ್ಷರಾಗಿರುತ್ತೇನೆ.

2015 ರಲ್ಲಿ ಒಕ್ಕೂಟದಲ್ಲಿ ಖಾಲಿ ಇದ್ದ ಹುದ್ದೆಗಳನ್ನು ಸರಕಾರಿ ಅನುಮತಿ ಪಡೆದು ನೇಮಕಾತಿ ಪ್ರಕ್ರಿಯೆ ಕೈಗೊಂಡಿರುತ್ತೇವೆ. ಅದರಂತೆ ನೇಮಕಾತಿ ಕಮಿಟಿ ನೇಮಿಸಿ ಅದರಲ್ಲಿ ಕಮಿಟಿ ಯವರು ಮೆರಿಟ್ ಆಧಾರದ ಮೇಲೆ 129 ಅಭ್ಯರ್ಥಿಗಳಿಗೆ ಒಕ್ಕೂಟದ ವತಿಯಿಂದ ನೇಮಕಾತಿ ಪತ್ರ ನೀಡಿ ಸದರಿಯವರ ಅಂಕಪಟ್ಟಿಗಳ ಸಿಂಧುತ್ವಗಾಗಿ ಕಳುಹಿಸಿಕೊಟ್ಟಿರುತ್ತೇವೆ. ಅದರಲ್ಲಿ 4 ಜನ ಅಭ್ಯರ್ಥಿಗಳ ಅಂಕಪಟ್ಟಿಗಳು ನಕಲಿಯಾಗಿರುತ್ತವೆ ಒಕ್ಕೂಟದ ಆಡಳಿತ ಮಂಡಳಿಗೆ ವರದಿ ಬಂದಿರುತ್ತದೆ. ಸಂದೀಪ್ ಮತ್ತು ಜಗದೀಶ್ ಮಾಡಿವಾಳ ರವರ ಪದವಿಯ ಅಂಕಪಟ್ಟಿಗಳು ನಕಲಿಯಾಗಿದೆ ಎಂದು, ಅಶೋಕ ಎಂಬುವವರ ಐ ಟಿ ಐ ಅಂಕಪಟ್ಟಿ ನಕಲಿಯಾಗಿದೆ ಎಂದು ಮತ್ತು ಕಾರ್ತಿಕ್ ಎಂಬ ಅಭ್ಯರ್ಥಿಯ ಪಿ ಯು ಸಿ ಅಂಕಪಟ್ಟಿ ನಕಲಿಯಾಗಿರುತ್ತದೆ ಎಂದು ವರದಿ ಬಂದಿರುತ್ತದೆ. ಸದರಿ ವಿಚಾರವನ್ನು ಆಡಳಿತ ಮಂಡಳಿಯ ಗಮನಕ್ಕೆ ವ್ಯವಸ್ಥಾಪಕ ನಿರ್ದೇಶಕರು ತಂದಿರುತ್ತಾರೆ. ನಂತರ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ. ನಾನು ಈ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಂ ಎಂ ಎಂ ವಕೀಲರಿಂದ**

ನಾನು ಆಯ್ಕೆ ಸಮಿತಿಯಲ್ಲಿ ಇರಲಿಲ್ಲ ನಿರ್ದೇಶಕರ ಸಮಿತಿಯಲ್ಲಿದ್ದೆ ಎಂದು ನುಡಿಯುತ್ತಾರೆ. 1 ನೇ ಆರೋಪಿಯ ಮೂಲ ಅಂಕಪಟ್ಟಿಯನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸಿರಲಿಲ್ಲ ಎಂದರೆ ಸರಿಯಲ್ಲ. ವ್ಯವಸಾಥಪಕ ಮಂಡಳಿಯವರು ವಿಶ್ವವಿದ್ಯಾಲಯಕ್ಕೆ ಕಳುಹಿಸಿ ಅವರಿಂದ ವರದಿ ಪಡೆದಿರುತ್ತಾರೆ. ನನ್ನ ಮೂಲಕ ಯಾವುದೇ ಅಂಕಪಟ್ಟಿಯನ್ನು ಕಳುಹಿಸಿರಲಿಲ್ಲ. ಆರೋಪಿಗಳು ಅಸಲಿ ಅಂಕಪಟ್ಟಿಯನ್ನು ಕೊಟ್ಟಿದ್ದರೂ ಸಹ ನಕಲಿ ಅಂಕಪಟ್ಟಿ ಕೊಟ್ಟಿದ್ದಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಒಕ್ಕೂಟದಲ್ಲಿ ಕಾರ್ಮಿಕ ಹಿತಾಸಕ್ತಿ ಸಂಘ ಇದೆ ಎಂದರೆ ಸರಿ. ಅಲ್ಲಿ ಗುಂಪುಗಳು ಇರುವುದಿಲ್ಲ. ಆರೋಪಿ ಉತ್ತರ ಕರ್ನಾಟಕದವರು ಎಂದರೆ ನನಗೆ ಗೊತ್ತಿಲ್ಲ. ಕಾರ್ಮಿಕ ಗುಂಪಿನ ಒತ್ತಾಯಕ್ಕೆ ಮಣಿದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಚಾಸಾ-1 ಮನ್ ಮುಲ್ ನ, ಎಂ ಡಿ ಎಂದರೆ ಸರಿ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ದಿಃ 28-10-2016 ರಂದು ಹೇಳಿಕೆ ನೀಡಿರುತ್ತೇನೆ. ಹೇಳಿಕೆಯನ್ನು ಶಾಮಿಲ್ ಆಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 2 ನೇ ಆರೋಪಿ ಯಾವಾ ಹುದ್ದೆಗೆ ಅರ್ಜಿ ಸಲ್ಲಿಸಿದ್ದರು ಎಂದು ನೆನಪಿಲ್ಲ. 2 ನೇ ಆರೋಪಿಗೆ ಸೇರಿದ ಎಲ್ಲಾ ಮೂಲ ದಾಖಲೆಗಳನ್ನು ನಾನು ನೋಡಿಲ್ಲ. ವಿಶ್ವವಿದ್ಯಾಲಯದಿಂದ ಬಂದ ವರದಿಯನ್ನು ನಾನು ನೋಡಿಲ್ಲ, ಎಂ ಡಿ ಯವರು ನೋಡಿರುತ್ತಾರೆ. ಅವರು ನನ್ನ ಗಮನಕ್ಕೆ ತಂದಿರುತ್ತಾರೆ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.